ಅರ್ಥವಾಗಲಿಲ್ಲ. ಅಧಿಕಾರಿಗಳನ್ನು ಕೇಳಿದರೆ, ಸರ್ಕಾರದಿಂದ ಹಣ ಬಿಡುಗಡೆ ಮಾಡಿಲ್ಲ, ಅದಕ್ಕೋಸ್ಕರ ಕೊಟ್ಟಿಲ್ಲವೆಂದು ಹೇಳುತ್ತಾರೆ, ಕ್ಷೇತ್ರಕ್ಕೆ ಹೋದರೆ ಹೆಂಗಸರೆಲ್ಲಾ ನಮ್ಮ ಅರ್ಜಿ ಕೊಟ್ಟಿದ್ದೇವೆ ಬಾಂಡ್ ಕೊಟ್ಟಿಲ್ಲವೆಂದು ಕೇಳುತ್ತಾರೆ.

ಶ್ರೀ ಸಿ.ಸಿ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ರತ್ನಾಕರ್‌ರವರು ಕೇಳಿದ್ದು ಮತ್ತು ಅನಿತಾ ಕುಮಾರ ಸ್ವಾಮಿಯವರು ಕೇಳಿರುವ ಪ್ರಶ್ನೆಗಳು ಸಾಮ್ಯತೆ ಹೊಂದಿರುವುದರಿಂದ, 2009–2010ನೇ ಸಾಲಿನ ಎಲ್ಲಾ ಭಾಗ್ಯಲಕ್ಷ್ಮಿ ಬಾಂಡುಗಳನ್ನು ಇನ್ನು ಕೆಲವೇ ದಿವಸಗಳಲ್ಲಿ ಹಂಚಿಕೆ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಉಳಿದಂಥವುಗಳಿಗೆ ಬೇಗ ಹಣವನ್ನು ಬಿಡುಗಡೆ ಮಾಡಿ ಬಾಂಡುಗಳನ್ನು ವಿತರಣೆ ಮಾಡುತ್ತೇವೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 15.12.2011ರ 8ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 127 ಪ್ರಶ್ನೆಗಳ ಪೈಕಿ 112 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಗಿದೆ.

ಅನುಬಂಧ–1 (ಭಾಗ– II)

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು :

(1) ವಿಷಯ : ವಿಧಾನ ಪರಿಷತ್ತಿನಲ್ಲಿ ದಿ: 8.12.11ರಂದು ಶಾಸಕರ ಭವನದ ಬಗ್ಗೆ ಪ್ರಸ್ತಾಪಿಸಿರುವ ಕುರಿತು.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಲ್ಲಿ 8ನೇ ತಾರೀಖಿನಂದು 12.50 ನಿಮಿಷಕ್ಕೆ ಒಂದು ಗಂಭೀರವಾದ ಚರ್ಚೆ ನಡೆದಿದೆ. ಚರ್ಚೆ ನಡೆಯಬೇಕಾದರೆ ಯಾವ ಕಾರಣಕ್ಕೆ ವಿಧಾನ ಪರಿಷತ್ತಿನ ಸದಸ್ಯರು ಈ ಪದಗಳನ್ನು ಉಪಯೋಗ ಮಾಡಿದ್ದಾರೋ ಗೊತ್ತಿಲ್ಲ, ಈ ಪದಗಳನ್ನು ಹೇಳುತ್ತೇನೆ, ಇದು ಯಾವ ರೀತಿಯ ಪದಗಳು ಏತಕ್ಕೆ ಉಪಯೋಗ ಮಾಡಿದ್ದಾರೆಂದು ನಮ್ಮ ಮನೆ ತೀರ್ಮಾನ

ಮಾಡಬೇಕಾಗುತ್ತದೆ. ಇದರಲ್ಲಿ ಇವರು ಹೇಳುತ್ತಾರೆ, ಶಾಸಕರ ಭವನ ಸ್ಲಂ ಆಗುತ್ತಿದೆ, ಈಗಾಗಲೇ ಇಷ್ಟೊಂದು ಕಟ್ಟಡಗಳಿಂದ ಉಸಿರಾಡಲಾಗುತ್ತಿಲ್ಲ ವೆಂದು ಹೇಳುತ್ತಾರೆ, ಕಾರ್ ಪಾರ್ಕಿಂಗ್‌ಗೆ ಇದರ ಅವಶ್ಯಕತೆ ಬೇಕಾ ಎಂದು ಹೇಳುತ್ತಾರೆ. ನನ್ನ ಮನಸ್ಸಿಗೆ ಬಹಳ ನೋವಾಗಿದೆ ಸರ್, ಇಲ್ಲಿ ನಾವಿರುವ ಶಾಸಕರ ಭವನ ಸ್ಲಂ ಇದ್ದ ಹಾಗೆ ಇದೆ, ಅದನ್ನು ಸರಿ ಮಾಡಲು ವಿಧಾನ ಸಭೆಯ ಸಭಾಧ್ಯಕ್ಷರು ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಪೂರ್ಣ ಓದಿದರೆ ಬಹಳ ಸಮಯವಾಗುತ್ತದೆಂದು ಇದರ ಹೈಲೈಟ್ ಹೇಳುತ್ತಿದ್ದೇನೆ. ಇನ್ನೊಂದು ಕಡೆ ಹೇಳುತ್ತಾರೆ, ಕಾಗ್ ಪಾರ್ಕಿಂಗಿಗೆ 50 ರೂಂಗಳನ್ನು ಕಟ್ಟುವುದು ಒಳ್ಳೆಯದಲ್ಲ, ಇದು ಬರಿ ಬಿಸನೆಸ್ ಮಾಡಿದಂತಾಗಿದೆ, ಹಾಗಾದರೆ ನಮಗೆ ಬೇರೆ ಯಾವುದಾದರೂ ಊರಿನಲ್ಲಿ ಕಟ್ಟಡ ಕಟ್ಟಿ ಕೊಡಲಿ ಅಲ್ಲಿ ಹೋಗುತ್ತೇವೆ, ಹೈಕೋರ್ಟ್ ಕಟ್ಟಡ ಕಟ್ಟಬಾರ ದೆಂದು ಅನೇಕ ಸಾರಿ ಹೇಳಿದೆ. ಶಾಸಕರ ಭವನ ಭಿಕ್ಷುಕರ ಕಾಲೋನಿ ಯಂತಾಗಿದೆ. ಅಲ್ಲಿ ಜಗತ್ತಿನಲ್ಲಿ ಇಲ್ಲದಿರುವ ಕಾರ್ ಪಾರ್ಕಿಂಗ್ ಮಾಡು ವುದನ್ನು ನೋಡುತ್ತಿದ್ದೇವೆ, ಇದನ್ನೆಲ್ಲಾ ಹೇಳಿಬಿಟ್ಟು, ನನಗೆ ಇನ್ನೊಂದು ಆಶ್ಚರ್ಯ ತಂದಿದ್ದು ಎಂದರೆ, ವಿರೋಧ ಪಕ್ಷದ ನಾಯಕರಾದ ಶ್ರೀಮತಿ ಮೋಟಮ್ಮನವರು ಇಲ್ಲಿ ನನಗೇನೂ ಗೊತ್ತಿರಲಿಲ್ಲ, ಶಂಕುಸ್ಥಾಪನೆ ಬರಬೇಕೆಂದು ಸುಮ್ಮನೆ ಕರೆದರೆಂದು ನಾನು ಹೋಗಿ ಬಿಟ್ಟೆ ಎಂದು ಹೇಳುತ್ತಾರೆ. ಸಭಾಧ್ಯಕ್ಷರು, ದೂರವಾಣಿಯ ಮೂಲಕ ಶಾಸಕರಭವನದ ಶಾಸಕರ ಕಾರುಗಳನ್ನು ವ್ಯವಸ್ಥಿತವಾಗಿ ನಿಲ್ಲಿಸಲು ಕಾಂಪ್ಲೆಕ್ಸ್ ರೀತಿ ಮಾಡುತ್ತಿರುವುದರಿಂದ, ದಯಮಾಡಿ ಗುದ್ದಲಿ ಪೂಜೆಗೆ ಬನ್ನಿ ಎಂದು ಹೇಳಿದ್ದರು, ಅದರಂತೆ ನಾನು ಹೋಗಿದ್ದೆನು, ಅದರಲ್ಲಿ ತಪ್ಪೇನು? ಅದರಲ್ಲೇನು ಅವ್ಯವಹಾರ? ಅಂದರೆ, ಒಂದು ಶಂಕುಸ್ಥಾಪನೆಗೆ ವಿರೋಧ ಪಕ್ಷದ ನಾಯಕರು ಬಂದು ನನಗೇನೂ ಗೊತ್ತಿಲ್ಲ ಸುಮ್ಮಸುಮ್ಮನೆ ಹೋಗಿದ್ದೆ ಎನ್ನುವುದು, ಈ ಚರ್ಚೆ ವಿಧಾನ ಪರಿಷತ್ತಿನಲ್ಲಿ ನಡೆದಿರುವುದು, ರಾಜ್ಯದ ಜನರಿಗೆ ಅತ್ಯಂತ ಕೆಟ್ಟ ಸುದ್ದಿ ಹೋಗುತ್ತದೆ. ನನ್ನ ಮನವಿ ಇದೆ, ಯಾವುದೇ ಕಾರಣದಿಂದ, ಶಾಸಕರ ಭವನವೆಂದರೆ, ಅಲ್ಲಿ ಬರಿ ಶಾಸಕವಿರುವುದೆಂದಲ್ಲ, ಅಲ್ಲಿ, ಆ ಕ್ಷೇತ್ರದ ಸಮಸ್ಯೆಗಳನ್ನು ಹೇಳಿಕೊಳ್ಳಲು ಬಂದಿರುವಂಥ ಎಲ್ಲಾ ಜನರಿಗೆ, ಅಲ್ಲಿರುವ ಕಾರ್ಯಕರ್ತರಿಗೆ, ಅಲ್ಲಿರುವ ಮತದಾರರಿಗೆ ಅನುಕೂಲ ವಾಗುವಂಥ, ಅವರ ಸಮಸ್ಯೆಗಳನ್ನು ಹೇಳಿಕೊಳ್ಳುವಂಥ ಒಂದು ಕೇಂದ್ರ ಸ್ಥಾನ. ಒಂದು ಕಡೆ ಶಾಸಕರ ಪೂರ್ತಿ ಒಟ್ಟಾಗಿದ್ದರೆ, ಬಂದಿರುವ ಜನರ

ಸಮಸ್ಯೆಗಳನ್ನು, ಅವರಿಗೆ ರಕ್ಷಣೆ ಕೊಡುವಂಥ ದೃಷ್ಟಿಯಿಂದಲೂ ಕೂಡ ಸೇರಿದಂತೆ ಇದು ಒಳ್ಳೆಯ ಕಾರ್ಯಕ್ರಮ. ಇಲ್ಲಿ, ವಿಧಾನ ಪರಿಷತ್ತಿನ ಸದಸ್ಯರು ಹೇಳುತ್ತಾ, ಇದು ಹಣ ಮಾಡುವಂಥ ಕಾರ್ಯಕ್ರಮ, ಸ್ಲಂ, ಭಿಕ್ಷುಕರೆಂದೆಲ್ಲಾ ಹೇಳಿದ್ದಾರೆ. ವಿಧಾನಪರಿಷತ್ತಿನ ಸದಸ್ಯರ ಕಳಕಳಿಯ ಬಗ್ಗೆ ನಮಗೆ ಬಹಳ ಸಂತೋಷವಿದೆ. ಅವರು ಇದೊಂದು ಹಣ ಮಾಡುವ ಒಂದು ಕಾರ್ಯಕ್ರಮವೆಂದು ಹೇಳಿದ್ದನ್ನು ಕೇಳಿದಾಗ ನನಗನಿಸಿದ್ದು, ಅವರಿಗೆ ರಾಜ್ಯ ಹಣದ ಬಗ್ಗೆ ಎಷ್ಟು ಕಳಕಳಿ ಇದೆ ಎಂದು ಗೊತ್ತಾಯಿತು. ಇದನ್ನು ನೋಡಿದ ಮೇಲೆ ನನಗನಿಸಿದೆ, ಇಷ್ಟೊಂದು ಹಣವನ್ನು ಉಳಿತಾಯ ಮಾಡಬೇಕೆಂದು ತೀರ್ಮಾನ ಮಾಡಿರುವ ವಿಧಾನ ಪರಿಷತ್ತಿನ ಸದಸ್ಯರು, ವಿಧಾನ ಪರಿಷತ್ತನ್ನೇ ಬ್ಯಾನ್ ಮಾಡಿಬಿಟ್ಟರೆ ಸಾವಿರಾರು ಕೋಟಿ ಉಳಿಯುತ್ತದೆ, ಅಂದ ಹಾಗೆ ಈ ರಗಳೆಯೇ ಬೇಡ, ವಿಧಾನ ಪರಿಷತ್ತನ್ನು ಬ್ಯಾನ್ ಮಾಡಿಬಿಡೋಣ.

(ಗೊಂದಲ)

ಅಧ್ಯಕ್ಷರು : ದುಡ್ಡು ಮಾಡುವ ಕಾರ್ಯಕ್ರಮವೆಂದು ಹೇಳಬಹುದಾ?

ಶ್ರೀ ಆರ್. ರೋಷನ್ ಬೇಗ್ : ಅದೆಲ್ಲಾ ರೆಕಾರ್ಡ್‌ಗೆ ಹೋಗುವುದು ಸರಿಯಿಲ್ಲ.

(ಗೊಂದಲ)

ಅಧ್ಯಕ್ಷರು : ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಅಭಯಚಂದ್ರ ಜೈನ್ : ಮುಖ್ಯಮಂತ್ರಿಗಳು ಮೇಲ್ಮನೆ ಸದಸ್ಯರಾಗಿ ಹೋಗುವುದಕ್ಕೆ ಚುನಾವಣೆಗೆ ಅರ್ಜಿ ಹಾಕಿದ್ದಾರೆ, ಅವರು ಹೋಗುವುದು ಬೇಡವೇ?

ಶ್ರೀ ಡಿ.ಎನ್.ಜೀವರಾಜ್ : ನೀವು ಯಾವುದನ್ನು ಯಾವುದಕ್ಕೊ ಕನೆಕ್ಷನ್ ಕೊಡಬೇಡಿ.

(ಗೊಂದಲ)

ಶ್ರೀ ಸಿದ್ದು ಸವದಿ : ಅಲ್ಲಿ ಸ್ಲಂ ಇದೆ, ದುಡ್ಡು ಹೊಡೆಯಲಾಗುವುದು, ಯಾವ ಶಾಸಕರು ದುಡ್ಡು ಹೊಡೆದಿದ್ದಾರೆ ಅವರು ಹೇಳಲಿ, ಕಟ್ಟಡ ಮಾಡಿದರೆ ದುಡ್ಡು ಹೊಡೆದಂತೆ ಅಂದರೆ ಅರ್ಥವೇನು? ನಿಮ್ಮ (ಅಭಯಚಂದ್ರ ಜೈನ್) ಬಗ್ಗೆಯೂ ಆಲೋಚನೆ ಮಾಡಬೇಕಲ್ಲ?

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಕ್ಕೆ ಹೊರಟಿರುವುದು, ನಮ್ಮ ಮುಖ್ಯಮಂತ್ರಿಗಳು ಪರಿಷತ್ತನ್ನು ಪ್ರವೇಶ ಮಾಡುತ್ತಾರೆ, ಇಲ್ಲದೆ ಇದ್ದರೆ, ಬೇಕಿದ್ದರೆ ಅವರು ವಿಧಾನ ಸಭೆಗೆ ಸ್ಪರ್ಧೆ ಮಾಡಿ ಗೆಲ್ಲುವ ಸಾಧ್ಯತೆ ಇದೆ, ತೃಪ್ತಿಯೂ ಇದೆ, ಮಾನ್ಯ ಮುಖ್ಯಮಂತ್ರಿಗಳ ಶಕ್ತಿ ಮತ್ತು ಸಾಮರ್ಥ್ಯದ ಬಗ್ಗೆ ಚರ್ಚೆ ಬೇಡ. ಇಲ್ಲಿ ಈ ಬಗ್ಗೆ ಇಷ್ಟು ಹಗುರವಾದ ಚರ್ಚೆ ನಡೆಯಬಾರದಿತ್ತು, ಈ ಸಭೆಯ ಗೌರವದ ಬಗ್ಗೆ ಚರ್ಚೆಯಾಗಿದೆ.

(ಗೊಂದಲ)

ಶ್ರೀ ಬಿ. ರಮಾನಾಥರೈ : ನಮ್ಮಷ್ಟು ಯೋಗ್ಯತೆ ಬರುವುದಕ್ಕೆ ಇನ್ನೊಂದು ಜನ್ಮದಲ್ಲಿಯೂ ಆಗುವುದಿಲ್ಲ. ಆ ಯೋಗ್ಯತೆ ಇರುವವರು ನಾವು. ನನ್ನ ಇತಿಹಾಸ ಚರಿತ್ರೆ ಎಲ್ಲಾ ನೋಡಿದ್ದೀರಾ ನೀವು? ನೋಡಿದರೆ ಗೊತ್ತಾಗುತ್ತದೆ ನಾವು ಯಾವ ದಾರಿಯಲ್ಲಿ ಬಂದಿದ್ದೇವೆಂದು.

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಮಾನಾಥ ರೈ ರವರು ಬಹಳ ಹಿರಿಯ ಸದಸ್ಯರು. ನನಗೆ ಅವರ ಬಗ್ಗೆ ಬಹಳ ಗೌರವ ಇದೆ. ನಾನು ಗಂಭೀರವಾದ ವಿಷಯ ಚರ್ಚೆ ಮಾಡಿದ್ದೇನೆ. ನಾನು ಹೇಳುವುದಕ್ಕೆ ಹೊರಟಿರುವುದು ವಿಧಾನ ಪರಿಷತ್ತಿನವರು ಪದೇ ಪದೇ ವಿಧಾನಸಭೆ ಬಗ್ಗೆ ಹಗುರವಾಗಿ ಮಾತನಾಡುವುದು ಒಳ್ಳೆಯದಲ್ಲ. ವಿಧಾನ ಪರಿಷತ್ತಿನ ರೂಮುಗಳನ್ನು ಈಗಾಗಲೇ ರಿನೋವೇಷನ್ ಮಾಡಿ ಆಗಿದೆ. ಅವರಿಗೆ ಒಳ್ಳೊಳ್ಳೆಯ ರೂಮುಗಳಾಗಿವೆ ಹಾಗಾಗಿ ಅವರಿಗೆ ವಿಧಾನಸಭೆಯ ಸದಸ್ಯರ ರೂಮುಗಳ ಬಗ್ಗೆ, ಅವರ ವಸತಿ ಬಗ್ಗೆ ಅವರಿಗೆ ಗೌರವ ಇಲ್ಲ. ಈ ರೀತಿ ಚರ್ಚೆ ಒಳ್ಳೆಯದಲ್ಲ. ಅವರು ಹಣ ಉಳಿಸುವ ಬಗ್ಗೆ ಮಾತನಾಡಿದರೆ ಅವರ ಬಗ್ಗೆ ಗೌರವ ಇದೆ. ಹಣ ಉಳಿಸುವುದಕ್ಕಾಗಿ ನಾನು ಇದನ್ನು ಹೇಳಿದೆ. ಆದರೆ ಇದು ಬರೀ ಶಾಸಕರ ವ್ಯವಸ್ಥೆ ಮಾತ್ರವಲ್ಲ. ಇದು ಈ ರಾಜ್ಯದ ವ್ಯವಸ್ಥೆ. ಈ ರಾಜ್ಯವನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ತೆಗೆದುಕೊಂಡು ಹೋಗಬೇಕೆಂದರೆ, ಇದು ನಡೆಯಬೇಕಾಗಿರುವಂತಹ ಕಾರ್ಯಕ್ರಮ. ನಿಮ್ಮ ಸ್ಥಾನದ ಬಗ್ಗೆ ನಮಗೆಲ್ಲರಿಗೂ ಅಪಾರವಾದ ಗೌರವವಿದೆ. ವಿಧಾನ ಸಭಾಧ್ಯಕ್ಷರು ಎನ್ನುವಂತಹ ಹೆಸರನ್ನು ಅವರು ಉಪಯೋಗ ಮಾಡಿರುವು ದರಿಂದ ನಾನು ಇದನ್ನು ವಿರೋಧ ಮಾಡುತ್ತೇನೆ. ನಿಮ್ಮ ಹೆಸರನ್ನು

ಉಪಯೋಗ ಮಾಡಿರುವುದಕ್ಕೆ ನಾನು ಖಂಡಿಸುತ್ತೇನೆ. ಈ ಸಭೆ ಸರ್ವಾನುಮತದಿಂದ ಅದನ್ನು ಖಂಡಿಸಬೇಕೆಂದು ನಾನು ನಿರ್ಣಯ ಮಂಡಿಸುತ್ತೇನೆ.

ಶ್ರೀ ಸುನಿಲ್ ಎ. ಹೆಗಡೆ : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಲ್ಲಿ ಈ ವಿಷಯ ಚರ್ಚೆ ಮಾಡಿದ್ದು ಈ ಸದನಕ್ಕೆ ಅಗೌರವ ಸೂಚಿಸಿದ ಹಾಗೆ. ಇದಕ್ಕೆ ನಮ್ಮದೂ ಬೆಂಬಲ ಇದೆ, ಇದರ ಬಗ್ಗೆ ರೆಸಲ್ಯೂಷನ್ ಮಾಡಬೇಕು. ಎಲ್ಲರೂ ಸೇರಿ ಇದನ್ನು ಖಂಡಿಸಬೇಕೆಂದು ಮನವಿ ಮಾಡುತ್ತೇನೆ.

ಅಧ್ಯಕ್ಷರು : ಇದರ ಬಗ್ಗೆ ಹೆಚ್ಚಿನ ಚರ್ಚೆ ಬೇಡ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಮಡಿಕೇರಿ) : ಮಾನ್ಯ ಅಧ್ಯಕ್ಷರೆ, ಅಲ್ಲಿ ಚರ್ಚೆ ಆಗಿರುವುದರಿಂದ ನಾವು ಚರ್ಚೆ ಮಾಡಬೇಕಾಗಿದೆ. ವಿಧಾನ ಪರಿಷತ್ತಿನಲ್ಲಿರುವ MLC ಗಳ ಬಗ್ಗೆ ನಮಗೆ ಗೌರವ ಇದೆ. ಆದರೆ ಅವರು ವಿಧಾನ ಪರಿಷತ್ತಿನಲ್ಲಿ ಈ ರೀತಿ ಸ್ಲಂ ಆಗುತ್ತದೆ ಎಂದು ಅವರು ಹೇಳಬಾರದಾಗಿತ್ತು. ಒಂದು ದಂಧೆ ನಡೆಯುತ್ತಿದೆ ಎನ್ನುವಂತಹ ವಿಚಾರವನ್ನು ಕೂಡ ಅವರು ಪ್ರಸ್ತಾಪ ಮಾಡಿದ್ದಾರೆ. ವಿಧಾನ ಸಭೆಯ ಅಧ್ಯಕ್ಷರಿಗೆ ಎಷ್ಟು ಗೌರವ ಇದೆ, ಅಷ್ಟೇ ಗೌರವ ವಿಧಾನ ಪರಿಷತ್ತಿನ ಸಭಾಪತಿಗಳಿಗೂ ಇದೆ, ಒಂದು ರೀತಿಯಲ್ಲಿ ಇದು ಚರ್ಚೆ ಆಗಿದ್ದು ತಪ್ಪು ಎಂದು ನನ್ನ ಅಭಿಪ್ರಾಯ. ಅಲ್ಲಿ ರಕ್ಷಣೆ ದೃಷ್ಟಿಯಿಂದ ಏನು ಮಾಡಬೇಕು, ಸ್ಲಂ ಆಗದ ರೀತಿಯಲ್ಲಿ ಏನು ಮಾಡಬೇಕು, ಅದರ ಬಗ್ಗೆ ಚರ್ಚೆ ಆಗಬೇಕಾಗಿತ್ತು. ಅಲ್ಲಿ ಹೋಟೆಲ್‌ಗಳು, ಶಾಪ್‌ಗಳೂ ಇವೆ. ಅದನ್ನು ಬೇಕಾದರೆ ಹೊರಗಡೆ ಹಾಕುವಂತಹ ಕೆಲಸ ಮಾಡಿ. ನಮ್ಮ ಶಾಸಕರ ರಕ್ಷಣೆ ಮಾಡುವುದಕ್ಕೆ ಏನು ವ್ಯವಸ್ಥೆ ಆಗಬೇಕೋ ಅದು ಆಗಬೇಕಾಗುತ್ತದೆ. ಆದರೆ MLC ಗಳಿಗೆ ಎಷ್ಟು ಜನ ಭೇಟಿ ಮಾಡಲಿಕ್ಕೆ ಬರುತ್ತಾರೆ? ವಿಧಾನಸಭಾ ಸದಸ್ಯರನ್ನು ಎಷ್ಟು ಜನ ಭೇಟಿ ಮಾಡಲಿಕ್ಕೆ ಬರುತ್ತಾರೆ? ಇದು ಚರ್ಚೆ ಆಗಬೇಕಾಗಿದೆ. MLC ಗಳನ್ನು ಯಾರೂ ಭೇಟಿ ಮಾಡುವುದಕ್ಕೆ ಬರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಅವರಿಗೆ ಯಾವುದೇ problem ಕೂಡ ಅರ್ಥವಾಗುವುದಿಲ್ಲ. ವಿಧಾನಸಭಾ ಸದಸ್ಯರನ್ನು ಗುಡ್ಡಗಾಡುಗಳಲ್ಲಿರುವವರು, ಹಳ್ಳಿಗಳಲ್ಲಿರುವವರು, ಬೀದಿಗಳಲ್ಲಿರುವವರು ಎಲ್ಲರೂ ಕೂಡ ಭೇಟಿ ಮಾಡುವುದಕ್ಕೆ ಬರುತ್ತಾರೆ. 24 ಗಂಟೆ ಅವರನ್ನು ಭೇಟಿ ಮಾಡುವಂತಹ ವ್ಯವಸ್ಥೆ ಆಗಬೇಕಾಗಿರುತ್ತದೆ. ಆದರೆ ರಕ್ಷಣೆಯ ದೃಷ್ಟಿಯಿಂದ ನೀವು ಆ ರೀತಿ ಬರುವಂತಹ ಜನರಿಗೆ ಅವರನ್ನು ಭೇಟಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಕಾರ್ ಪಾರ್ಕಿಂಗ್

ಕೂಡ ಬೇಕಾಗುತ್ತದೆ. ಇವತ್ತು ನಾವು ನಮ್ಮ ಕಾರ್ ತಂದಾಗ, ನಾವು ಎಲ್ಲೋ ಬೀದಿಯಲ್ಲಿ ನಿಲ್ಲಿಸಿ ಬರುವಂಥ ವ್ಯವಸ್ಥೆ ಆಗಬೇರದು. ಕಳೆದ ಸಾರಿ ನನ್ನ ಕಾರ್ ತಂದಾಗ ನನ್ನ ಕಾರಿನಲ್ಲಿದ್ದ ಸ್ಪೆಷ್ಲಿ ಕಳುವಾಯಿತು. ಶಾಸಕರ ಏನು ವಾಹನಗಳು ಬರುತ್ತದೆ ಅದನ್ನು ನಿಲ್ಲಿಸುವುದಕ್ಕೆ ಒಂದು ವ್ಯವಸ್ಥೆ ಆಗಬೇಕಾಗಿದೆ ಅದರ ಜೊತೆಗೆ, ಶಾಸಕರಿಗೂ ಕೂಡ ನೆಮ್ಮದಿಯಿಂದ ಇರುವಂತಹ ವ್ಯವಸ್ಥೆ ಕೂಡ ಆಗಬೇಕಾಗಿದೆ. ಏನು ಹೋಟೆಲ್‌ಗಳಿವೆ, ಅಂಗಡಿಗಳಿವೆ ಅವುಗಳನ್ನು ಸ್ವಲ್ಪ ಹೊರಗಡೆ ಹಾಕುವ ವ್ಯವಸ್ಥೆ ಮಾಡಿ. ಹೊರಗಡೆ ಹಾಕಿಬಿಡಿ ಎಂದರೆ ಬೀದಿಗೆ ಹಾಕಿ ಎಂದು ಹೇಳುವುದಿಲ್ಲ. ಸ್ವಲ್ಪ ದೂರ ಹಾಕಿ. ಶಾಕಸರಿಗೆ separate ಇರುವಂಥ ವ್ಯವಸ್ಥೆ ಮಾಡಿ. MLC ಗಳಿಗೆ ಬಹಳ ತೊಂದರೆ ಆಗುವುದಾದರೆ ಅವರಿಗೆ ಒಂದು separate ಕಟ್ಟಡ ಕೊಟ್ಟಿಬಿಡಿ. ಅವರಿಗೆ ಬೇರೆ ಕಡೆ ಕೊಟ್ಟುಬಿಡಿ. MLC ಗಳಿಗೆ ಎಲ್ಲಾ ಸವಲತ್ತುಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಆಗುತ್ತದೆ. MLA ಗಳಿಗೆ ಒಂದೇ ರೂಮಿನಲ್ಲಿ ಇರುವಂಥ ವ್ಯವಸ್ಥೆ, MLA ಗಳಿಗೆ ಸರಿಯಾದ ಟಾಯ್ಲೆಟ್ ಕೂಡ ಇಲ್ಲ. ಅದು ಲೀಕೇಜ್ ಆಗುತ್ತಾ ಇದೆ. At least ಒಂದು 2 ರೂಮಿನ ವ್ಯವಸ್ಥೆ ಆದರೂ ಆಗಬೇಕಾಗಿರುತ್ತದೆ. ಆ ನಿಟ್ಟಿನಲ್ಲಿ ಈ ರೀತಿ ಚರ್ಚೆ ಮಾಡಿರುವುದು ಸರಿಯಲ್ಲ. ದಯವಿಟ್ಟು ಅವರು ಆ ರೀತಿ ಇದ್ದರೆ ಅವರಿಗೆ separate ಕಟ್ಟಡವನ್ನು ಕೊಡಿ. ನಮಗೆ separate ಕಟ್ಟಡ ಕೊಟ್ಟುಬಿಡಿ. ವಿಧಾನಸಭಾ ಸದಸ್ಯರನ್ನು ಒಂದು ರೀತಿಯಲ್ಲಿ ಕಾಣುವುದು ತಪ್ಪಿದೆ. ಅದನ್ನು slum ಆಗಲಿಕ್ಕೆ ಬಿಡಬಾರದು ಎಂದು ನಮ್ಮೆಲ್ಲರ ಆಸೆ ಇದೆ.

(ಗೊಂದಲ)

ಶ್ರೀ ಅಪ್ಪಾಜಿ ಎಸ್. ನಾಡಗೌಡ : ಮಾನ್ಯ ಅಧ್ಯಕ್ಷರೆ, ನೀವು ನಮ್ಮನ್ನು ರಕ್ಷಣೆ ಮಾಡುವಂತವರು ಈ ಪೀಠದಲ್ಲಿ ಕುಳಿತಿದ್ದೀರಿ. ವಿಧಾನಸಭೆ ಆವರಣ ಎಲ್ಲಾ ತಮಗೆ ಸಂಬಂದಪಟ್ಟಿದ್ದು. ನಿಮ್ಮ ಸಮಿತಿ ಇದೆ, House ಕಮಿಟಿ ಇದೆ. ಇದರ ಬಗ್ಗೆ ಎಲ್ಲರನ್ನೂ ಕರೆದು ತಾವು ಆ ಸಮಸ್ಯೆಗಳನ್ನು ಇತ್ಯರ್ಥ ಮಾಡಬೇಕು. ಶಾಸಕರ ಹಕ್ಕಿಗೆ ಚ್ಯುತಿ ಬರದ ಹಾಗೆ ಅವರ ಗೌರವಕ್ಕೆ ಚ್ಯುತಿ ಬರದ ಹಾಗೆ ತಾವು ಕ್ರಮ ತೆಗೆದುಕೊಳ್ಳಬೇಕು. ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ ದಯಮಾಡಿ ನಮಗೆ UKP ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ

ಮಾಡಿಕೊಡಿ. ನಾವು ಎಷ್ಟು ದಿವಸಗಳಿಂದ ಕೇಳುತ್ತಿದ್ದೇವೆ. ದಯಮಾಡಿ ಚರ್ಚೆಗೆ ಅವಕಾಶ ಮಾಡಿ ಕೊಡಿ.

(ಗೊಂದಲ)

ಶ್ರೀ ಕೆ.ಜಿ ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಮನೆಯ ಬಗ್ಗೆ ಅವರು ಮಾತನಾಡಿದರೆ, ನಮ್ಮ ಹಕ್ಕಿಗೆ ಚ್ಯುತಿ ಆಗಿದೆ, ಅವರು ಮಾತನಾಡಿದ್ದು ತಪ್ಪಿದೆ ಎಂದು ಅವರಿಗೆ ಮನವರಿಕೆ ಮಾಡಬೇಕು. ಹಕ್ಕುಚ್ಯುತಿ ಆಗಿದೆ, ಕೂಡಲೇ ಇಲ್ಲಿ ಒಂದು ನಿರ್ಣಯ ಪಾಸ್ ಮಾಡಿ ಅದು ಮಾಡಿದ್ದು ತಪ್ಪು ಎಂದು ಅವರಿಗೆ ಸೂಚನೆ ಕೊಡಬೇಕು.

ಶ್ರೀ ಎನ್. ಯೋಗೀಶ್ ಭಟ್ (ಉಪ ಸಭಾಧ್ಯಕ್ಷರು) : ಮಾನ್ಯ ಅಧ್ಯಕ್ಷರೆ, ವಸತಿ ಸಮಿತಿಯಲ್ಲಿ ಇದರ ಬಗ್ಗೆ ಸುಧೀರ್ಘವಾಗಿ ಚರ್ಚೆಯಾಗಿದೆ. Advocate general Law secretary ಅವರೆಲ್ಲರನ್ನು ಕರೆಸಿ ಕಾನೂನು ಅನುಮತಿಗಳು ವ್ಯಾಪ್ತಿಯಲ್ಲಿ ಬರುವುದರಿಂದ ಮತ್ತು 12 ಶಾಸಕರಿಗೆ ಇವತ್ತಿಗೂ ರೂಮುಗಳು ಇಲ್ಲ. ಹೊರಗಡೆ ಉಳಿದುಕೊಳ್ಳುವ ಒಂದು ಅನಿವಾರ್ಯತೆ ಇದೆ. ಇಂತಹ ಸಂದರ್ಭದಲ್ಲಿ ನಮಗೆ 50 ರೂಮ್ ಗಳು ಬೇಕೆಂದು ಹೇಳಿ, ಕೇವಲ ಕಾರ್ ಪಾರ್ಕಿಂಗ್ ಅಲ್ಲ, ಎರಡು ಬೇಸ್ ಮೆಂಟ್ ಗಳಲ್ಲಿ ಕಾರ್ ಪಾರ್ಕಿಂಗ್ ಜೊತೆ ground floor ನಲ್ಲಿ ಕಾರ್ ಪಾರ್ಕಿಂಗ್ ಬರುತ್ತದೆ. ನಂತರ ಒಂದು ಸಾವಿರ ಸ್ಕ್ವೇರ್ ಫೀಟ್‌ನ 10 ರೂಮ್‌ಗಳು ಒಂದು ಫ್ಲೋರ್‌ನಲ್ಲಿ, ಐದು ಫ್ಲೋರ್‌ಗಳು ಬರುತ್ತವೆ, ಒಟ್ಟು 50 ರೂಮ್ ಗಳನ್ನು ಮಾಡುಕೊಳ್ಳುವಂತಹ ವ್ಯವಸ್ಥೆ ಮಾಡಿ. ಬಹುಶಃ ಅದಕ್ಕೆ ತಗಲಬಹುದಾದ ಸಮಯ 2–3 ವರ್ಷಗಳಾಗಬಹುದು. ಆದರೆ ನಮ್ಮ ಅವಧಿಯಲ್ಲಿ ಆಗಿರತಕ್ಕ ತೊಂದರೆಗಳು ಮುಂದಿನ ಶಾಸಕರಿಗೆ ತೊಂದರೆಗಳು ಬರಬಾರದು ಎಂದು ಇದರ ಬಗ್ಗೆ ಸುದೀರ್ಘವಾದ ಚರ್ಚೆ ಮಾಡಿ ಕೂಲಂಕಷವಾಗಿ even estimate ಬಗ್ಗೆಯೂ ಕೂಡ ಸಮಗ್ರವಾದ ಚರ್ಚೆಯಾಗಿದೆ. ಪ್ರಾರಂಭದಲ್ಲಿ ಕೊಟ್ಟಿರುವಂತಹ estimate ಗಳನ್ನು ತಿರಸ್ಕಾರ ಮಾಡಿ ಅದರ ಬಗ್ಗೆ revaluation ಮಾಡಬೇಕು. ವಸ್ತುನಿಷ್ಠನಾದ valuation ಆಗಬೇಕು ಎಂಬ ಬಗ್ಗೆ ಕೂಡ ಚರ್ಚೆ ಆಗಿ, ಅಂತಿಮವಾಗಿ ಒಂದು ತೀರ್ಮಾನಕ್ಕೆ ಬಂದಿರುವಂಥದ್ದು. ವಿಧಾನ ಪರಿಷತ್ತಿನಲ್ಲಿ ಹಿರಿಯ ಶಾಸಕರು ಅದರ ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಉಪಯೋಗ ಮಾಡಿರುವಂಥ ಅನೇಕ ಶಬ್ದಗಳು ಒಂದು ರೀತಿ ನೋವು ತಂದಿರುವಂಥದ್ದು.

ಅಧ್ಯಕ್ಷರ ಬಗ್ಗೆಯಾಗಲಿ, ಇನಿತರ ಬಗ್ಗೆಯಾಗಲಿ, ಖಂಡಿತವಾಗಿ ನೋವು ತರುವಂತಹ ರೀತಿಯಲ್ಲಿ ಆಗಿದೆ. ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಏನಾದರೂ ಇದರ ಬಗ್ಗೆ ಉಲ್ಲೇಖ ಮಾಡುವಾಗ ನಮ್ಮ ಅಧ್ಯಕ್ಷರ ಜೊತೆ ಇರಬಹುದು, ಸಭಾಪತಿಯವರೊಡನೆ ಚರ್ಚೆ ಮಾಡಿದ್ದಲ್ಲಿ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಮಾನ್ಯ ಸಭಾಪತಿಯವರು ಕೂಡ ಬಂದಿದ್ದಾರೆ. ಸನ್ಮಾನ್ಯ ಅಧ್ಯಕ್ಷರು ಇದ್ದರು. ಪ್ರತಿಪಕ್ಷದ ನಾಯಕಿಯಾದ ಶ್ರೀಮತಿ ಮೋಟಮ್ಮ ಅವರು ಬಂದಿದ್ದರು. ಅನೇಕ ಹಿರಿಯರು ಅಲ್ಲಿ ಬಂದಿದ್ದರು. ಬದು ಅದನ್ನು ಶಿಲಾನ್ಯಾಸ ಮಾಡುವ ಸಂದರ್ಭದಲ್ಲಿ ವಿನ್ಯಾಸಗಳನ್ನು ಕೂಡ ಸಮಗ್ರವಾಗಿ ಚರ್ಚೆ ಮಾಡಿದ್ದಾರೆ. ಎಲ್ಲರಿಗೂ ತೃಪ್ತಿಯಾಗುವ ರೀತಿಯಲ್ಲಿ ಕಾಮಗಾರಿ ಆಗಬೇಕೆಂದು ಸೂಚನೆ ಕೊಡಲಾಗಿದೆ. ಇಷ್ಟೆಲ್ಲಾ ಆದ ನಂತರ ಇದು ಹಿತಕರವಾದ ಚರ್ಚೆ ಅಲ್ಲ. ಇನ್ನು ಮುಂದೆ ಇದಕ್ಕೆ ಅವಕಾಶ ಕೊಡದೆ, ನಮ್ಮ ಶಾಸಕರು ಅದನ್ನು ಭಾವನಾತ್ಮಕವಾಗಿ ತೆಗೆದುಕೊಳ್ಳುವುದು ಬೇಡ. ತಪ್ಪಾಗಿರುವುದು ತಪ್ಪಾಗಿದೆ ಎಂದು ಹೇಳುವಂಥ ಅಧಿಕಾರ ಖಂಡಿತ ನಮಗೆ ಇದೆ. ಅವರು ಇನ್ನು ಮುಂದೆ ಅದಕ್ಕೆ ಹೆಚ್ಚು ಉಪ್ಪುಖಾರ ಹಾಕಿ ಉಲ್ಬಣಗೊಳಿಸುವುದು ಬೇಡ. ಬೇಕಾದರೆ ಇನ್ನೇನಾದರೂ clarification ಇದ್ದರೆ ಸಮಿತಿ ಸಭೆಯಲ್ಲಿ ಅಥವಾ ನಮ್ಮ ಅಧ್ಯಕ್ಷರ ಜೊತೆ ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳೋಣ. ಈ ನಿಟ್ಟಿನಲ್ಲಿ ಖಂಡಿತವಾಗಿ ಇದನ್ನು ಒಂದು ದೊಡ್ಡ issue ಮಾಡುವ ವಿಷಯವಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಆಗಲಿ, ಇಲ್ಲಿಗೆ ಇದನ್ನು ಮುಕ್ತಾಯ ಮಾಡೋಣ.

(2) ವಿಷಯ : ಕುಕ್ಕೆ ಸುಬಹ್ಮಣ್ಯ ದೇವಸ್ಥಾನದಲ್ಲಿ ನಡೆಯುತ್ತಿರುವ ಮಡೆ ಸ್ನಾನ ಆಚರಣೆಯನ್ನು ನಿಷೇಧಿಸುವ ಬಗ್ಗೆ.

– – –

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು) : ಮಾನ್ಯ ಅಧ್ಯಕ್ಷರೆ, ನಾನು ಈ ಸದನದ ಸದಸ್ಯನಾಗಿ ಮೊದಲನೆಯ ಬಾರಿಗೆ ಆಯ್ಕೆಯಾಗಿದ್ದರೂ ಕೂಡ ನಾನು ಸಂಸತ್ ಸದಸ್ಯನಾಗಿ ಸುಮಾರು ಇಪ್ಪತ್ತು/ಇಪ್ಪತ್ತೈದು ವರ್ಷಗಳು ಆಯ್ಕೆಯಾಗಿದ್ದವನು. ಮೊನ್ನೆ ನಡೆದಂಥ ಚರ್ಚೆಯಲ್ಲಿ ಭಾವಗಹಿಸುವಾಗ ಸ್ವಲ್ಪ ನಿಮಗೆ ಅಸಮಧಾನವಾಯಿತು. ಆದರೆ I wanted to put it